STARRED QUESTIONS

(to which oral answers were given).

Madam SPEAKER.—We will take Sri Byrappa's Question some time later as the C.M. is not present.

'POTIGE' TO BARAWARDAR SHANBHOGUES

34. Sri S. M. SHEERANALY CHANDASEKHAR (Hosanagar).—

Will the Minister for Revenue be pleased to state:—

(*a*) whether the Government is aware that the 'Potige' due to Barawardar Shanbhogues has not been paid;

(*b*) if so, the action taken in the matter to pay the Potige?

Sri N. HUTCHAMASTHY GOWDA (Minister for Revenue).—

(*a*) The Potige due to the Barawardar Shanbhogues who performed duty personally has been paid regularly as and when it fell due;

(*b*) Does not arise in view of the answer to (*a*) above.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ನನ್ನ ಪ್ರಶ್ನೆಯನ್ನು ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಕೇಳಿದ್ದೇನೆಂದರೆ, ವಂಶಪಾರಂಪರ್ಯವಾಗಿದ್ದ ಶ್ಯಾನುಭೋಗರನ್ನು ವಜಾ ಮಾಡುವ ಕಾಲದಲ್ಲಿ ಅವರಿಗೆ ಕೊಡಬೇಕಾದಂತಹ ಕಾಂಪೆನ್‌ಸೇಶನ್, ಪೋಟಿಗಿ ಇತ್ಯಾದಿ ಪಾವತಿ ಮಾಡಿಲ್ಲವೆಂದು ಅವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಇದರ ಬಗ್ಗೆ ಏನು ಏರ್ಪಾಡು ಮಾಡಿದ್ದೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹಾಕಿರುವ ಪಶ್ನೆ ಸ್ಪಷ್ಟವಾಗಿದೆ. ಅವರು ಕೇಳಿರುವುದು ಎಲ್ಲರಿಗೂ ಅರ್ಥವಾಗುವ ಸ್ಥಿತಿಯಲ್ಲಿ ಇದೆ. ಅವರು "ಬರವಾರದಾರ್ ಶ್ಯಾನುಭೋಗರುಗಳಿಗೆ ಪೋಟಿಗೆ ಬಾಕಿಯನ್ನು ನೀಡದಿರುವುದು ಸರ್ಕಾರದವರಿಗೆ ಗೊತ್ತಿದೆಯೇ" ಎಂದು ಕೇಳಿದ್ದಾರೆ. ಅದಕ್ಕೆ ಉತ್ತರದಲ್ಲಿ "ಕೊಟ್ಟಿದೆ" ಎಂದು ಹೇಳಿದೆ. ಅದ್ದರಿಂದ ಅರ್ಥವಾಗಿಲ್ಲವೆಂದು ಹೇಳುವುದು ಸರಿಯಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈಗ ಇವರು ಹೈಕೋರ್ಟು ಮತ್ತು ಸುಪ್ರೀಂ ಕೋರ್ಟಿಗೆ ಹೋಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಅವರು ಕೋರ್ಟಿಗೆ ಹೋಗಿರುವುದು ಬೇರೆ ವಿಚಾರದಲ್ಲಿ. ಪೋಟಿಗೆ ಕೊಡಲಿಲ್ಲವೆಂದು ಹೋಗಿಲ್ಲ.

ಶ್ರೀ ವಿ. ಎನ್. ವಾಜೀರ್.—ಕೆಲವು ಶ್ಯಾನುಭೋಗರಿಗೆ 2-3 ಸಾವಿರ ಕಾಂಪೆನ್‌ಶೇಶನ್ ಕೊಟ್ಟಿರುವುದು ಯಾವ ಆಧಾರದ ಮೇಲೆ ಮತ್ತು ಯಾವ ದೃಷ್ಟಿಯಿಂದ ಅದನ್ನು ಕೊಡುತ್ತಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಇಲ್ಲಿ ಪ್ರಶ್ನೆ ಇರುವುದು ಬರವಾರದಾರ್ ಶ್ಯಾನುಭೋಗರಿಗೆ ಪೋಟಿಗೆ ಕೊಡತಕ್ಕದ್ದು. ಅವನ್ನು ಎರಡ್ಮೂ ಕಡೆಗಳಲ್ಲಿಯೂ ಕೊಟ್ಟಿದೆ. ಉದಾಹರಣೆಗೆ ಬೆಂಗಳೂರು ಜಿಲ್ಲೆಯಲ್ಲಿ ಸುಮಾರು 215 ಜನರು ಕ್ಲೈಮ್ಸ್ ಹಾಕಿದ್ದಾರೆಂದು ಅವರಿಗೆ ಕೊಟ್ಟಿಲ್ಲ. ಉಳಿದ ಕಡೆಗಳಲ್ಲಿ ಬರವಾರವಾರ್ ಅಲ್ಲದವರಿಗೆ ಸಂಬಳ ಅಥವಾ ಪೋಟಿಗೆ ಕೊಡತಕ್ಕ ಪ್ರಶ್ನೆ ಬರುವುದಿಲ್ಲ.

† Indicates that the remarks or speeches have not been revised by the member concerned.

ಶ್ರೀ ಎಂ. ಬಿ. ರಾಮಸ್ವಾಮಿ.—ಕೆಲವರು ಬರವದಾತರು ಆದರೂ ಕೂಡ ಅವರಿಗೆ ಪೋಟಿಗೆ ತಲಪದೆ ಇರತಕ್ಕದ್ದು, ತಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಏನು ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಥವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅವುಗಳ ಬಗ್ಗೆ ಕೂಡಲೇ ಕಾರ್ಯಕ್ರಮ ತೆಗೆದುಕೊಂಡು ಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಶರಣಪ್ಪ.—ರಾಯಚೂರು ಜಿಲ್ಲೆಯಲ್ಲಿ 1964ರಿಂದ ಕೆಲಸ ಮಾಡುತ್ತಿದ್ದ ಶ್ಯಾನು ಭೋಗರಿಗೆ ಪೋಟಿಗೆ ಮತ್ತು ವೇತನಗಳನ್ನು ಕೊಟ್ಟಿಲ್ಲವೆಂಬುದರ ಬಗ್ಗೆ ಅವರು ಮನವಿಯನ್ನು ನಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದರೆ ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನಗೆ ಬಂದಿರತಕ್ಕಂತಹ ಸಮಾಚಾರದ ಪ್ರಕಾರ ಎಲ್ಲರಿಗೂ ಪೋಟಿಗೆ ಪಾವತಿಯಾಗಿದೆ. ಬಾಕಿ ಯಾರಿಗೂ ಇಲ್ಲವೆಂಬುದು ಅಂಕಿ ಅಂಶಗಳಿಂದ ಗೊತ್ತಾಗುತ್ತದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ತಾವು ಈಗ ಯಾವುದೂ ಬಾಕಿ ಇಲ್ಲವೆಂದು ಉತ್ತರ ಹೇಳುತ್ತಿದ್ದೀರಿ. ನೂರಾರು ಜನರಿಗೆ ಕೊಡತಕ್ಕದ್ದು ಬಾಕಿ ಇದೆ. ಅದರ ಬಗ್ಗೆ ಬೇಗನೇ ತೀರ್ಮಾನ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಖಂಡಿತವಾಗಿಯೂ ಮಾಡಬಹುದು.

ಅಧ್ಯಕ್ಷರು.—ಪ್ರಶ್ನೆ ನಂ. 58 ಮತ್ತು 60 ಜತೆಗೆ ತೆಗೆದುಕೊಳ್ಳೋಣ.

RELEASE OF WATER TO ANDHRA

58. Sri B. SATHYANARAYANA SINGH (Hospet).—

Will the Minister of State for Major Irrigation be pleased to state :—

(*a*) whether it is a fact that the inflow of water in May 1972 have been wrongly gauged by the Tungabhadra Board, if so, the step taken to set right this mistake;

(*b*) whether the Government has received any reports from Tungabhadra Reservoir Circle, Munirabad, in this regard;

(*c*) whether it is a fact that the Secretary of the Tungabhadra Board was absent when Andhra was allowed to draw 3 T.M. Cft. water in April 1972;

(*d*) whether the Superintending Engineer representing Andhra was officiating as Secretary in April, 1972 when water to Andhra was released;

(*e*) if so, whether the acting Secretary has manoeuvred to allow more than 3 T.M.Cft. of water to Andhra in April, 1972 ?